ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರುಗಳು ಮೊದಲು ಹೇಳಿದ ಉತ್ತರವನ್ನು ಕೇಳಿದರೋ ಇಲ್ಲವೋ ತಿಳಿಯದು. ಇದು ಜನವರಿ ಅಖೈರಿಗೆ ಕೊಟ್ಟಿರತಕ್ಕಂಥ ಹಣವೆಂದು ಸ್ಪಷ್ಟವಾಗಿ ತಿಳಿಸಿದ್ದೇನೆ.

ಶ್ರೀ ಸಿ. ಬೈರೇಗೌಡ.—ಹಣವನ್ನು ಅವರಿಗೆ ಶೀಘ್ರವಾಗಿ ಕೊಡುವುದಕ್ಕೆ ಒಂದು ಟೈಂ ಲಿಮಿಟ್ ಹಾಕಿ ಅದರ ಬಗ್ಗೆ ಆರ್ಡರ್ ಹೊರಡಿಸಿ ಅವರಿಗೆ ಆ ಹಣ 15 ದಿವಸಗಳೊಳಗೋ, ಒಂದು ತಿಂಗಳು, 2 ತಿಂಗಳು, 3 ತಿಂಗಳೊಳಗೆ ಮುಟ್ಟುವ ಬಗ್ಗೆ ಏನಾದರೂ ಕ್ರಮ ತೆಗೆದು ಕೊಂಡಿದ್ದೀರಾ ?

ಶ್ರೀ ಎನ್. ಹುಚ್ಚಮಾಸ್ತಿಗಾಡ —ಅವರಿಗೆ ಹಣವನ್ನು ಕೊಡುವುದಕ್ಕೆ ಮುಂಚೆಯೇ ಕೆಲವು ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆ ಎಲ್ಲಾ ಕೆಲಸಗಳು ಪೂರೈಸಿದ ನಂತರ ಕೂಡಲೇ ಅವರಿಗೆ ಹಣ ಕೊಡುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ. ಟಿ. ಆರ್ ಶಾಮಣ್ಣ.—ನಮಾಜವಾದದ ತತ್ವಕ್ಕನುಸಾರವಾಗಿ ಹಾಗೂ ಮಾನವೀಯತೆಯ ದೃಷ್ಟಿಯಿಂದ ಅವರಿಗೆ ಈಗ ಕೊಡಬೇಕಾಗಿದ್ದ ಹಣವನ್ನು ಶೀಘ್ರವಾಗಿ ಕೊಟ್ಟಿರೆ ಅದು ನಿಮ್ಮ ತತ್ವಕ್ಕೆ ಒಪ್ಪುತ್ತದಲ್ಲವೇ ? ಅವರಲ್ಲಿ ಅನೇಕರು ಕಡುಬಡವರಾಗಿ ತೊಂದರೆ ಪಡುತ್ತಾ ಇರುವುದರಿಂದ ಅವರಿಗೆ ಜಾಗ್ರತೆಯಾಗಿ ಕೊಟ್ಟಿದೆ- ಇನ್ನು ಕೆಲವರಿಗೆ ತಡವಾಗಿ ಕೊಟ್ಟಿದೆ. 1974ರಲ್ಲಿಯೇ ನರ್ಕಾರದ ವಶಕ್ಕೆ ಆ ಜಮೀನುಗಳು ಬಂದಿರುವುದರಿಂದ ನರ್ಕಾರ ಕೂಡಲೇ ಇಂಟೆರಿವು ರಿಲೀಫ್ ಕೊಡುವುದಕ್ಕಾಗುತ್ತದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗಾಡ.—ಇಂಟೆರಿಂ ರಿಲೀಫ್ ಯಾರಿಗೆ ಕೊಡಬೇಕೆಂದು ಮಾನ್ಯ ಸದಸ್ಯರು ಹೇಳಲಿಲ್ಲ ಈಗ ಅದರ ಬಗ್ಗೆ ತೀರ್ಮಾನವಾದಕೂಡಲೇ ಕೊಡತಕ್ಕಂಥ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದೇನೆ. ಹಣ ನರಕಾಗದೆ ಹೋದರೆ ಇನ್ನೂ ಹೆಚ್ಚು ಹೆಚ್ಚು ಹಣವನ್ನು ಒದಗಿಸುವ ಏರ್ಪಾಡು ಮಾಡಿಕೊಂಡಿದ್ದೇವೆ. ಅದನ್ನು ಮಾನವೀಯತೆಯ ದೃಷ್ಟಿಯಿಂದಲೇ ಕೊಟ್ಟಿದ್ದೇವೆ. ವ್ಯಾಜ್ಯಗಳು ತೀರ್ಮಾನವಾದ ಕೂಡಲೇ ಅವರಿಗೆ ಹಣ ಪಡೆಯತಕ್ಕಂಥ ಹಕ್ಕಿದೆ, ಅದುದರಿಂದಲೇ ಎಲ್ಲಾ ದೃಷ್ಟಿಯಿಂದ ವಿಚಾರ ಮಾಡಿ ಅದನ್ನು ಜಾಗ್ರತೆಯಾಗಿ ಕೊಡುವ ವ್ಯವಸ್ಥೆ ಮಾಡುತ್ತೇವೆ,

Cases pending with Land Tribunals

109 SRI SEERNALI CHANDRASHEKAR (Hosanagar).—Will the Minister for Revenue be pleased to state:-

(*a*) the number of cases still pending with the Land Tribunals in the State,

(*b*) the reason for the inordinate delay in disposing of cases :

(*c*) what is the reason for this delay ;

(*d*) whether there is inadequate staff in the tribunals

(*e*) in view of the fact that the Government is spending lot of money to each tribunals and to each case, is it not necessary that the Government has to issue direction to each tribunals to complete the cases within a specified period ?

SRI N. HUTCHMASTHY GOWDA (Minister for Revenue).—

(*a*) Applications 498711—Declarations 90846 (at the end of January 1977)

(*b*) the tribunals have actually started disposing of tenants' applications from July 1975 onwards in earnest. In earlier stages the rate of disposal of applications by tribunals was not high as they had to scrutinise receipts and complete certain preliminaries. Now the Tribunals have gained experience and the rate of disposal of applications has picked up.

(*c*) Does not arise in view of reply to clause (b)

(*d*) Spl. staff has been appointed wherever pendency is heavy.

(*e*) Circular instructions have already been issued prescribing norms of disposal.

ಶ್ರೀ ಎಸ್. ಎಂ. ಶೀರಾ್ನಳಿ ಚಂದ್ರಶೇಖರ್.—ಉತ್ತರದಲ್ಲಿ 4,98 711 ಕೇಸುಗಳಲ್ಲಿ 90,846 ಕೇಸುಗಳು ತೀರ್ಮಾನವಾಗಿದೆ ಎಂದು ಕೊಟ್ಟಿದ್ದೀರಿ. ಈ 90,846 ಕೇಸುಗಳು, ಯಾವ ಒಂದು ತರಹದ ಜಿಜ್ಞಾಸೆ ಇಲ್ಲದೆ ಒಪ್ಪಿಗೆಯಿಂದ ತೀರ್ಮಾನವಾಗಿರಬಹುದೆಂದು ನನಗೆ ಕಾಣುತ್ತದೆ. ಇನ್ನೂ ಉಳಿದವುಗಳು ಬರೀ ಜಿಜ್ಞಾಸೆಯಿಂದ ಕೂಡಿರತಕ್ಕಂಥ ಪ್ರಕರಣಗಳೆಂದು ತೋರುತ್ತದೆ. ಆದ್ದರಿಂದ ಆದಷ್ಟು ಬೇಗ ಅವನ್ನೆಲ್ಲಾ ತೀರ್ಮಾನ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಧಿಕಾರಿಗಳ ಒಪ್ಪಿಗೆಯಿಂದ ತೀರ್ಮಾನವಾಗಿರುವುದು ಅಷ್ಟು. ಕೆಲವಾರು ಪ್ರಕರಣಗಳ ಬಗ್ಗೆ ವಿರೋಧ ಮಾಡಿ ಅವರು ಒದಗಿಸಿದಂತಹ ಸಾಕ್ಷಿಯನ್ನು ಕೇಳಿದ ಮೇಲೆ ತೀರ್ಮಾನವಾಗತಕ್ಕ ಕೇಸುಗಳ ಬಗ್ಗೆ ವಿವರ ಹೇಳುವುದು ಕಷ್ಟ. ಈಗಾಗಲೇ ತೀರ್ಮಾನವಾಗಿರುವಂತಹ ಸಂಖ್ಯೆಯನ್ನು ಸಭೆಯ ಮುಂದಿಟ್ಟಿದ್ದೇವೆ. ಆದರೆ ಇನ್ನುಳಿದ ಪ್ರಕರಣಗಳು ಎಷ್ಟು ಬೇಗ ಬೇಗ ತೀರ್ಮಾನವಾಗುವುದಕ್ಕೆ ಸಾಧ್ಯ ಎಂಬ ಬಗ್ಗೆ ನಾನು ಈಗಾಗಲೇ ವಿವರಗಳನ್ನು ಸಹ ಕೊಟ್ಟಿದ್ದೇನೆ. ಅದನ್ನು ಹಿಂದೆಯೂ ಕೂಡ ಹೇಳಿದ್ದೇನೆ. ಈ ವರ್ಷದ ಅಖೈರಿನಲ್ಲಿ ಬಹುಮಟ್ಟಿಗೆ ಎಲ್ಲಾ ವ್ಯಾಜ್ಯಗಳು ಪರಿಹರಿಸುವ ರೀತಿಯಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಸ್. ಎಂ. ಶೀರಾ್ನಳಿ ಚಂದ್ರಶೇಖರ್.—ಡಿಸ್‌ಪ್ಯೂಟೆಡ್.—ಕೇಸುಗಳಲ್ಲಿ ದಿವಸಕ್ಕೆ ಒಂದೆರಡು ಕೇಸುಗಳಿಗಿಂತ ಜಾಸ್ತಿ ತೀರ್ಮಾನ ಮಾಡುವುದಕ್ಕೆ ಭೂ ನ್ಯಾಯ ಮಂಡಲಿಗೆ ಆಗುತ್ತಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಆ ಕೇಸುಗಳ ಬಗ್ಗೆ ಯಾವ ರೀತಿ ಪರಿಹಾರ ಕೊಡುತ್ತೀರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರಿಗೆ ಕೆಲವು ಅಂಕಿ ಅಂಶಗಳನ್ನು ಕೊಟ್ಟರೆ ಅವರಿಗೆ ಇರತಕ್ಕಂಥ ಅನುಮಾನ ಬಗೆಹರಿಯುತ್ತದೆಂದು ನಾನು ತಿಳಿಯುತ್ತೇನೆ. 1977 ಫೆಬ್ರವರಿ ಅಖೈರಿಗೆ 17,306 ಟ್ರಿಬ್ಯೂನಲ್ ಸಿಟ್ಟಿಂಗ್ಸ್ ಆಗಿವೆ. ಆ ಟ್ರಿಬ್ಯೂನಲ್ ಸಿಟ್ಟಿಂಗ್ಸ್‌ನಲ್ಲಿ 2,34,139 ವಾಣಿಜ್ಯಗಳು ತೀರ್ಮಾನವಾಗಿವೆ. ಅಂದರೆ ಸರಾಸರಿ ಒಂದು ಸಿಟ್ಟಿಂಗ್ಸ್‌ಗೆ 14.11 ರಷ್ಟು ವ್ಯಾಜ್ಯಗಳು ತೀರ್ಮಾನವಾದ ಹಾಗೆ ಆಗಿರುತ್ತದೆ. ಯಾವುದೇ ಒಂದು ಕೇಸಿನಲ್ಲಿ ಹೆಚ್ಚು ವಿವರಗಳು ಬೇಕಾದಾಗ, ಹೆಚ್ಚು ಚರ್ಚೆಯಾದಾಗ, ಸ್ಥಳ ಅಜಮಾಯಿಷಿ ಮಾಡಬೇಕಾದ ಪ್ರಸಂಗ ಬಂದಾಗ್ಗೆ, ಕಡಿಮೆ ವ್ಯಾಜ್ಯಗಳು ತೀರ್ಮಾನವಾಗಿರಬಹುದು. ಆದ್ದರಿಂದ ಈ ಒಂದು ಆಧಾರದ ಮೇಲೆ ಈ ವರ್ಷದ ಅಖೈರಿಗೆ ಬಹುಮಟ್ಟಿಗೆ ಎಲ್ಲವೂ ತೀರ್ಮಾನವಾಗಬಹುದೆಂದು ನಿರೀಕ್ಷಿಸಿದ್ದೇವೆ. ಅದರ ಜೊತೆಗೆ ಇನ್ನೂ ಕೆಲವು ಕೆಪೆ ಹೆಚ್ಚು ವ್ಯಾಜ್ಯಗಳು ಉಳಿದಿರುವ ಕಡೆಗಳಲ್ಲಿ ಅಡಿಶನಲ್ ಟ್ರಿಬ್ಯೂನಲ್ ಕೂಡ ಮಾಡಿದ್ದೇವೆ. ಆದ್ದರಿಂದ ಈ ವರ್ಷದ ಅಖೈರಿನಲ್ಲಿ ಎಲ್ಲವನ್ನೂ ತೀರ್ಮಾನ ಮಾಡಬೇಕೆಂಬುದು ಸರ್ಕಾರದ ಸಂಕಲ್ಪವಿದೆ.

ಶ್ರೀ ವಿ. ಎನ್. ಪಾಟೀಲ್.—ತಾವು ಹೇಳುವಂತಹ ಕಾರಣಗಳ ಜೊತೆಗೆ ಇನ್ನೂ ಕೆಲವು ಕಡೆಗಳಲ್ಲಿ ಟ್ರಿಬ್ಯೂನಲ್ ಮೆಂಬರ್ಸ್ ರಾಜೀನಾಮೆ ಕೊಟ್ಟಿದ್ದರೂ ಅವರ ಜಾಗದಲ್ಲಿ ಬೇರೆ ಯವರನ್ನು ನೇಮಕ ಮಾಡಿಲ್ಲ. ಕೆಲವು ಕಡೆಗಳಲ್ಲಿ ಛೇರ್ಮನ್‌ಗಳು ಕೂಡ ಟ್ರಿಬ್ಯೂನಲ್ಲಿನಲ್ಲಿ ಇಲ್ಲದೇ ಇರುವ ಪ್ರಸಂಗವಿದೆ. ಕೆಲವು ಕಡೆಗಳಲ್ಲಿ ಟ್ರಿಬ್ಯೂನಲ್ ಛೇರ್ಮನ್ ಇಲ್ಲದೆ ಕೇಸುಗಳನ್ನು ಪೋಸ್ಟ್‌ಪೋನ್ ಮಾಡುವುದು, ಕೆಲವು ಸಂದರ್ಭಗಳಲ್ಲಿ ಅವರೇ ರಜಾ ಹಾಕುವುದು, ನನ್ನ ಕ್ಷೇತ್ರದಲ್ಲಿ ಟ್ರಿಬ್ಯೂನಲ್ ಛೇರ್ಮನ್ ಸ್ಥಳದಲ್ಲಿದ್ದರೂ ನಾಲ್ಕು ತಿಂಗಳಿಂದ ಒಂದು ಪೀಟಿಂಗಿಗೂ ಅಜೆಂಡ್ ಆಗಿಲ್ಲ. ಇಂತಹ ಕೆಲವು ಕಾರಣಗಳು ಇವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೆಲವು ವೇಳೆ ಅಧಿಕಾರಿಗಳನ್ನು ಪೋಸ್ಟ್ ಮಾಡುತ್ತೇವೆ. ಅಕಸ್ಮಾತ್ತಾಗಿ ರಜಾ ತೆಗೆದುಕೊಂಡಿರಬಹುದು, ಅಂತಹ ಸಂದರ್ಭಗಳು ಇರಬಹುದು. ನನಗೆ ಗೊತ್ತಿರುವ ಹಾಗೆ ಕೋರಂ ಕಾರಣಕ್ಕೋಸ್ಕರ ಯಾವುದೇ ಸಭೆಗಳಲ್ಲಿ ತೊಂದರೆಯಾಗಿದೆ ಯೆಂದು ನನ್ನ ಗಮನಕ್ಕೆ ಬಂದಿಲ್ಲ. ಅಕಸ್ಮಾತ್ತಾಗಿ ರಾಜೀನಾಮೆ ಕೊಟ್ಟಿದ್ದರೆ ಸರ್ಕಾರದ ಗಮನಕ್ಕೆ ಬಂದಕೂಡಲೇ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಅಧಿಕಾರಿಗಳು ಯಾವುದೇ ಕಾರಣ ದಿಂದಾಗಲೀ ಸಭೆಗಳನ್ನು ಅಡ್‌ಜರ್ನ್ ಮಾಡಬಾರದೆಂದು ತಿಳುವಳಿಕೆ ಕೊಟ್ಟಿದ್ದೇವೆ. ಎಲ್ಲೆಲ್ಲಿ ಸ್ಪೆಷಲ್ ಛೇರ್ಮನ್ ಇದ್ದಾರೆ ಅಂತಹ ಕಡೆಗಳಲ್ಲಿ ತಿಂಗಳಿಗೆ ಇಷ್ಟೇ ಸಿಟಿಂಗ್ಸ್ ಮಾಡಬೇಕು ಎಂದು ಹೇಳಿದ್ದೇವೆ. ಸಬ್‌ಡಿವಿಜನಲ್ ಆಫೀಸಿನಲ್ಲಿ ಇದ್ದರೆ ಇಷ್ಟು ಸಿಟಿಂಗ್ಸ್ ಆಗಬೇಕೆಂದು ತಿಳುವಳಿಕೆ ಕೊಟ್ಟಿರುವುದರಿಂದ ಇದಕ್ಕೆ ವಿರುದ್ಧವಾಗಿ ಏನಾದರೂ ನಡೆದಿದ್ದರೆ ಅಥವಾ ಅಕಸ್ಮಾತ್ತಾಗಿ ರಜಾ ತೆಗೆದುಕೊಂಡಿದ್ದರೆ ಅದಕ್ಕೆ ವಿಶೇಷ ಕಾರಣವಿರಬಹುದು: ಅಥವಾ ವರ್ಗವಾಗಿರಬಹುದು. ಇದನ್ನು ಬಿಟ್ಟರೆ ಬೇರೆ ಏನೂ ಕಾರಣವಿಲ್ಲ. ಇನ್ನೇನಾದರೂ ವಿಶೇಷ ಕಾರಣವಿದ್ದರೆ ಅದಕ್ಕೆ ಕೂಡಲೇ ಪರಿಹಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಯು. ಟಿ ಫರೀದ್.—ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲಕ್ಷಕ್ಕಿಂತ ಹೆಚ್ಚು ಅರ್ಜಿ ಗಳು ತೀರ್ಮಾನವಾಗದೆ ಇರುವುದರಿಂದ ಅಲ್ಲಿಯ ಭಾಗಗಳಿಗೆ ಫಿರ್ಕಾಕ್ಕೆ ಒಂದು ಟ್ರಿಬ್ಯೂನಲ್ ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ರೀತಿ ಸುಮಾರು 19 ಫಿರ್ಕಾಗಳು ಇವೆಯೆಂದು ಕೇಳಿದ್ದೇನೆ. ಅವಕ್ಕೆಲ್ಲಾ ಬೇರೆ ಬೇರೆ ಟ್ರಿಬ್ಯೂನಲ್‌ಗಳನ್ನು ಮಾಡುವುದಕ್ಕೆ ಆಲೋಚನೆ ಮಾಡಿದ್ದೇವೆ. ಆದಷ್ಟು ಬೇಗ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್.ಎಂ. ಶೀರಣ್ಣಳಿ ಚಂದ್ರಶೇಖರ್.—ಒಬ್ಬರು ಚೇರ್‌ಮನ್‌ನನ್ನು ಮೂರು ನಾಲ್ಕು ಟ್ರಿಬ್ಯೂನಲ್‌ಗಳಿಗೆ ನೇಮಿಸಿರುವುದರಿಂದ ಅದರಲ್ಲೂ ತಿಂಗಳಲ್ಲಿ 30 ದಿವಸಗಳು ಟ್ರಿಬ್ಯೂನಲ್ ಸಿಟಿಂಗ್ಸ್ ಕೂಡಲಿಕ್ಕೆ ಸಾಧ್ಯವಿಲ್ಲವಾದ್ದರಿಂದ ಕೇಸುಗಳು ಜಾಗ್ರತೆ ತೀರ್ಮಾನವಾಗಲು ಕಷ್ಟ ವಾಗಿದೆ. ಜೊತೆಗೆ ಸಾಕ್ಷಿದಾರರು ಹೇಳುವ ವಿಚಾರಗಳನ್ನೆಲ್ಲಾ ಚೇರ್‌ಮನ್ ಅವರೇ ಕೂತು ಕೊಂಡು ಬರೆಯುವುದಕ್ಕೆ ಸಾಕಷ್ಟು ಕಾಲಾವಕಾಶವನ್ನು ತೆಗೆದು ಕೊಳ್ಳುತ್ತದೆ ಆದ್ದರಿಂದ ಅವರಿಗೆ ಜೈಪಿಸ್ಟ್ ಇಲ್ಲದೆ ಇರುವುದರಿಂದ ಕೇಸುಗಳು ವಿಳಂಬವಾಗುತ್ತದೆಂದು ನನ್ನ ಭಾವನೆ. ಇದನ್ನು ಸರಿಪಡಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ —ಇಲ್ಲಿಯವರೆಗೆ ಜೈಪಿಸ್ಟ್‌ಗಳಿಗೆ ಅಭಾವವಿತ್ತು ಜೊತೆಗೆ ಕನ್ನಡ ಜೈಪ್‌ರೈಟರ್ ಇರಲಿಲ್ಲ. ಈಗ ಕನ್ನಡ ಜೈಪ್‌ರೈಟರ್‌ಗಳು ಬಂದಿವೆ ಆದ್ದರಿಂದ ಇನ್ನು ಕನ್ನಡ ಜೈಪಿಸ್ಟ್ ನೇಮಕ ಮಾಡಿಕೊಳ್ಳುವುದಕ್ಕೆ ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೇವೆ. ಅಷ್ಟಾಯವರೆಗೆ ಅವನೇ ಬರೆದುಕೊಳ್ಳಬೇಕು. ನನಗೆ ತಿಳಿದಮಟ್ಟಿಗೆ ಕೋರ್ಟುಗಳಲ್ಲಿ ಸಾಕ್ಷಿದಾರರನ್ನು ಕೇಳಿ ನ್ಯಾಯಾಧೀಶರೇ ಬರೆದುಕೊಳ್ಳುವುದಿಲ್ಲವೆ ? ಸದ್ಯದಲ್ಲಿ ಅದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ಹೇಳಿರುವುದನ್ನು ಮತ್ತು ಅವರ ಸಲಹೆಗಳನ್ನು ಯೋಚನೆ ಮಾಡುತ್ತೇವೆ. ಜೊತೆಗೆ ಇನ್ನು ಏನಾದರೂ ಸಲಹೆಗಳು ಇದ್ದರೆ ಪ್ರತ್ಯೇಕವಾಗಿ ಬರೆದು ಕೊಟ್ಟರೆ ಅದನ್ನು ಎಷ್ಟರ ಮಟ್ಟಿಗೆ ಕಾರ್ಯಗತಮಾಡುವುದಕ್ಕೆ ಸಾಧ್ಯವೆಂದು ಪರಿಶೀಲನೆ ಮಾಡಿ ಅವೆಲ್ಲವನ್ನೂ ಕಾರ್ಯಗತ ಮಾಡುವುದಕ್ಕೆ ಪ್ರಯತ್ನಮಾಡುತ್ತೇವೆ.